# ನಿಮಗೆ ತಿಳಿದಿದೆಯೋ.... ?



ಪರಿಸರೀಯ ಪರಿಣಾಮಗಳ ಮೌಲ್ಯಮಾಪನ
ಪ್ರಕ್ರಿಯೆಯ ಮೇಲೊಂದು ವ್ಯಂಗ ಚಿತ್ರ ಮಾಲಿಕೆ

# ನಿಮಗೆ ತಿಳಿದಿದೆಯೇ.... ?

ಪರಿಸರೀಯ ಪರಿಣಾಮಗಳ ಮೌಲ್ಯಮಾಪನ
ಪ್ರಕ್ರಿಯೆಯ ಮೇಲೊಂದು ವ್ಯಂಗ ಚಿತ್ರ ಮಾಲಿಕೆ

ನಾಗರಿಕ ಗ್ರಾಹಕ ಮತ್ತು ನಾಗರಿಕ ಕ್ರಿಯಾ ಗುಂಪು (ಸಿಎಜಿ)
2016

ಪುಟ ವಿನ್ಯಾಸ,
ಗ್ರಾಫಿಕ್ ವಿನ್ಯಾಸ ಮತ್ತು
ಸಚಿತ್ರ ವಿವರಣೆ:

ರವಿ

ರಫಿಯಾ

ಮೀನಾ

# ಪರಿಸರೀಯ ಪರಿಣಾಮಗಳ ಮೌಲ್ಯಮಾಪನ (ಇಐಎ) ಪ್ರಕ್ರಿಯೆಯ ಕುರಿತು ಸಮುದಾಯಕ್ಕೆ ತಿಳುವಳಿಕೆ ನೀಡುವುದು

ಮುತ್ತು ಮೆಟ್ರೊ ನಗರದಲ್ಲಿ ಒಬ್ಬ ಅಕೌಂಟಂಟ್ ಆಗಿ ಕೆಲಸಮಾಡುತ್ತಾನೆ. ತಮ್ಮ ಪಾಲಕರ ಭೇಟಿಗಾಗಿ ಹಳ್ಳಿಗೆ ಬರುತ್ತಾನೆ. ಮುತ್ತೂನ ತಾಯಿ ಅವನನ್ನು ಕಂಡು ಹರ್ಷಗೊಳ್ಳುತ್ತಾಳೆ ಮತ್ತು ಅವನನ್ನು ಬರಮಾಡಿಕೊಳ್ಳುತ್ತಾಳೆ.




ನನಗೆ ನಿಮ್ಮನ್ನು ನೋಡಬೇಕೆನಿಸಿತು, ಅದಕ್ಕೆ ತಕ್ಷಣ ಬಂದೆ!
ಎಲ್ಲರೂ ಹೇಗಿದ್ದೀರಿ?
ಚೆನ್ನಾಗಿದ್ದೇವೆ.
ರವಿ ಎಲ್ಲಿ?
ರವಿ, ಓಹ್... ಅವನು ಚೆನ್ನಾಗಿದ್ದಾನೆ. ಫಲಿತಾಂಶ ಬಂದಿದೆ. ಮತ್ತೆ ಒಂದು ಪೇಪರ್‌ನಲ್ಲಿ ಫೇಲ್ ಆಗಿದ್ದಾನೆ.....ಅವನಿಗೆ ಏನೂ ಕಾಳಜೀ ಇಲ್ಲ,
enjoy
ಬೆಳಿಗ್ಗೆಯೇ ತನ್ನ ಸ್ನೇಹಿತರೊಂದಿಗೆ ಹೊರಗೆ ಹೋಗಿದ್ದಾನೆ.... ಎಂದೂ ಮನೆಯಲ್ಲಿ ಇರುವುದೇ ಇಲ್ಲ...


ಮತ್ತು ಅಪ್ಪ ಅವನ ಮೇಲೆ ಬಹಳ ಸಿಟ್ಟಾಗಿ ದ್ದಾರೆ, ಇದೆಲ್ಲ ಇದ್ದಿದ್ದೆ, ನಾವದನ್ನು ನಂತರ ಮಾತನಾಡೋಣ..
ನಿನ್ನ ಕೆಲಸ ಹೇಗೆ ನಡೆದಿದೆ. ನಗರ ಜೀವನ ಹೇಗಿದೆ? ನೀನು ತೂಕ ಕಳೆದುಕೊಂಡಿರುವೆ ಅನಿಸುತ್ತದೆ.
ಓಹ್, ಇಲ್ಲ... ನಾನು ಚೆನ್ನಾಗಿಯೇ ಇದ್ದೇನೆ ಅಮ್ಮ...
ನನ್ನ ರೂಮ್ ಮೇಟ್ ಜಯಪ್ರಸಾದ ಉತ್ತಮ ಹುಡುಗ ಮತ್ತು ನಾವಿಬ್ಬರೂ ಚೆನ್ನಾಗಿ ಹೊಂದಿಕೊಳ್ಳುತ್ತೇವೆ...
ನಾನು ಬೆಳಗಿನ ಉಪಹಾರ ತಯಾರಿಸುತ್ತೇನೆ ಮತ್ತು ಅವನು ನಮಗಿಬ್ಬರಿಗೂ ರಾತ್ರಿ ಊಟ ತಯಾರಿಸುತ್ತಾನೆ.
ಅವನೂ ನಿನ್ನೊಂದಿಗೇ ಕೆಲಸ ಮಾಡುತ್ತಾನೆಯೇ?
ಇಲ್ಲ. ಅವನು ಒಂದು ಎನ್‌ಜಿಓ ದಲ್ಲಿ ಕೆಲಸ ಮಾಡುತ್ತಾನೆ.


ಅಮ್ಮ.. ಅಪ್ಪ ಎಲ್ಲಿ?
ಅವರು ಉಪಹಾರ ಮುಗಿದ ತಕ್ಷಣ ಯಾವುದೋ ಮಹತ್ವದ ವಿಷಯ ಚರ್ಚಿಸಬೇಕೆಂದು ರಾಮಸ್ವಾಮಿ ಅಂಕಲ್ ಮನೆಗೆ ಭೇಟಿಯಾಗಲು ಹೋಗುವುದಾಗಿ ಹೇಳಿ ಹೋದರು.
ಈಗಾಗಲೇ ಹೋಗಿ 4 ಗಂಟೆ ಆಯಿತು...ಬಹುಶಃ ಇಷ್ಟರಲ್ಲಿಯೇ ಬರಬಹುದು.
ನೀನು ಫ್ರೆಶ್ ಆಗು. ನಾನು ನಿನಗೆ ತಿಂಡಿ ಕಾಫಿ ಮಾಡುವೆ.
ಗ್ರಾಮದಲ್ಲಿ ಎಲ್ಲರೂ ಹೇಗಿದ್ದಾರೆಯೇ?
ಎಲ್ಲರೂ ಚೆನ್ನಾಗಿದ್ದಾರೆ ಮುತ್ತೂ, ಆದರೆ ರಾಮಸ್ವಾಮಿ ಅಂಕಲ್ ತಂದೆ ಒಂದು ವಾರದ ಕೆಳಗೆ ಬಿದ್ದ ಕಾರಣ ಅವರ ಆರೋಗ್ಯ ಚೆನ್ನಾಗಿಲ್ಲ.
ಓಹ್... ನಾನು ಅವರನ್ನು ನಂತರ ಭೇಟಿಯಾಗುವೆ.


ಖತಿರೇಸನ್ ಮನೆಗೆ ಬರುತ್ತಾರೆ. ಮಗನನ್ನು ಕಂಡು ಆಶ್ಚರ್ಯ ಮತ್ತು ಸಂತೋಷ ಪಡುತ್ತಾರೆ.
ಅವರು ಸಂತೋಷ ಮತ್ತು ಚಂಚಲಗೊಂಡಿರುವುದನ್ನು ಮುತ್ತೂ ಗಮನಿಸುತ್ತಾನೆ.
ಹೇ ಮುತ್ತೂ, ಏನಾಶ್ಚರ್ಯ! ಯಾವಾಗ ಬಂದೆ ಮತ್ತು ಹೇಗಿರುವೆ?
ಚೆನ್ನಾಗಿದ್ದೇನೆ ಅಪ್ಪಾ. ಬೆಳಿಗ್ಗೆ 10 ಗಂಟೆಗೆ ಬಂದೆ.
ನೀವು ರಾಮಸ್ವಾಮಿ ಅಂಕಲ್ ಮನೆಗೆ ಹೋಗಿದ್ದಿರೆಂದು ಅಮ್ಮ ಹೇಳಿದಳು.
ಅಂಕಲ್ ತಂದೆ ಹೇಗಿದ್ದಾರೆ?


ಸುಧಾರಿಸುತ್ತಿದ್ದಾರೆ.
ಏನಾಗಿದೆ ಅಪ್ಪಾ ನಿಮಗೆ? ನೀವು ಒಳಗೆ ಬಂದಾಗಿನಿಂದ ಏನೋ ಸಂಭ್ರಮಗೊಂಡಂತೆ ಕಾಣುತ್ತಿದೆ.
ಅಪ್ಪ ಮತ್ತು ಮಗ ಪಡಸಾಲೆಯಲ್ಲಿ ಕುಳಿತಿದ್ದಾರೆ
ಓಹ್! ನೀನು ಬಂದಿದ್ದು ಒಳ್ಳೆಯದೇ ಆಯಿತು
ಮೀನಾಕ್ಷೀ... ನೀನೂ ಬಾ...ನನಗೆ ಏನೋ ಒಚಿದು ಆಸಕ್ತಿದಾಯಕ ವಿಷಯ ಹೇಳಬೇಕಾಗಿದೆ..
.....ನಾವು ಇನ್ನುಮುಂದೆ ರವಿಯ ಭವಿಷ್ಯದ ಕುರಿತು ಚಿಂತಿಸ ಬೇಕಾಗಿಲ್ಲ....
... ಇಂದು, ನಾನು ರಾಮಸ್ವಾಮಿ ಅವರ ಮನೆಯಿಂದ ಬರುತ್ತಿರುವಾಗ ಪಂಚಾಯತ ಲೀಡರ್ ಭೇಟಿಯಾಗಿದ್ದರು... ಮತ್ತು.......


...ಅವರು ಹೇಳಿದರು.. ನಮ್ಮ ಗ್ರಾಮದ ಸಮೀಪದಲ್ಲಿ ಒಚಿದು ಥರ್ಮಲ್ ವಿದ್ಯುತ್ ಘಟಕ ಬರುತ್ತದೆಯಂತೆ......
ಮತ್ತು ಮಾಲೀಕರು ಇಡೀ ಗ್ರಾಮದ ಪ್ರತಿ ಮನೆಗೆ ಒಬ್ಬನಿಗೆ ಕೆಲಸ ನೀಡುತ್ತಾರಂತೆ. ಒಳ್ಳೆಯ ಸುದ್ದಿಯಲ್ಲವೇ?
ದೇವರೆ! ನಿನಗೆ ದೊಡ್ಡ ನಮಸ್ಕಾರ..
ರವಿಯ ಭವಿಷ್ಯದ ಕುರಿತು ನಿಜಕ್ಕೂ ಚಿಂತೆಯಾಗಿತ್ತು... ಏಕೆಂದರೆ...
... ಅವನು ಸರಿಯಾಗಿ ಓದುತ್ತಿಲ್ಲ ಮತ್ತು ಒಚಿದಲ್ಲ ಒಚಿದು ವಿಷಯದಲ್ಲಿ ಫೇಲ್ ಆಗುತ್ತಿದ್ದ..
..ಕಂಪನಿ ಒಂದು ಕೆಲಸ ಅಚಿತ ಕೊಟ್ಟರೆ, ಅವನ ಭವಿಷ್ಯ ಸುರಕ್ಷಿತ ಮತ್ತು ನಾವೂ ಸುಖದಿಂದ ಜೀವಿಸಬಹುದು!


ಅಮ್ಮಾ... ಒಚಿದು ನಿಮಿಷ ನಿಲ್ಲು!
ಘಟಕ ಎಲ್ಲಿ ಉದ್ದೇಶಿಸಲಾಗಿದೆ ಎಚಿದು ನಿಮಗೆ ತಿಳಿದಿದೆಯೇ ಅಪ್ಪಾ..?
?!!
... ಅವರು ನಮ್ಮ ಭೂಮಿಗಳನ್ನು ಸ್ವಾಧೀನಪಡಿಸಿಕೊಳ್ಳುತ್ತಾರೆಯೆ? ನಮ್ಮ ಕೃಷಿ ಭೂಮಿ ಮತ್ತು ಬದುಕಿಗೆ ಏನಾದರೂ ಬಾಧೆ ಉಂಟಾಗುತ್ತದೆಯೇ?----
.....ನಿಮಗೆ ತಿಳಿದಿದೆಯೇ, ಉದ್ದೇಶಿತ ಕಂಪನಿಯ ಮಾಲೀಕ/ಪ್ರವರ್ತಕ ಘಟಕ ಸ್ಥಾಪಿಸಲು ಅನುಸರಿಸಬೇಕಾದ ಕೆಲವು ಪ್ರಕ್ರಿಯೆಗಳಿರುತ್ತವೆ?
ನನಗೆ ಗೊತ್ತಿಲ್ಲ ಮುತ್ತೂ...!
ಅಪ್ಪ, ನನಗೆ ತಿಳಿದಿದೆ, ಅಲ್ಲಿ ಅನೇಕ ಮಹತ್ವದ ಹಂತಗಳು ಮತ್ತು ಪ್ರಕ್ರಿಯೆಗಳಿವೆ. ಮತ್ತು......
ನಮ್ಮ ಪಂಚಾಯತಿ ಲೀಡರಿಗೂ ಇದು ತಿಳಿದಿಲ್ಲ ಅನಿಸುತ್ತದೆ


.....ಘಟಕವನ್ನು ಸ್ಥಾಪಿಸಲು ಪ್ರವರ್ತಕ ಅವುಗಳನ್ನು ಅನುಸರಿಸಲೇ ಬೇಕಾಗುತ್ತದೆ ...
ನನ್ನ ರೂಮ್–ಮೇಟ್ ಜಯಪ್ರಸಾದ...
.. ಇಂಥ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಒಂದು ಎನ್‌ಜಿಓ ದಲ್ಲಿ ನೌಕರಿ ಮಾಡುತ್ತಾನೆ ...
...- ಮೊನ್ನೆ ಯಾವುದೋ ಬರಲಿರುವ ಉದ್ಯಮ/ಘಟಕದ ಸಮಸ್ಯೆಯ ಕುರಿತು ಮಾತನಾಡುತ್ತಿದ್ದ...ನೀವು ಒಪ್ಪಿದಲ್ಲಿ.......
ನಾನು ಅವನಿಗೆ ಇಲ್ಲಿ ಬಂದು ನಿಮಗೆ ಪ್ರಕ್ರಿಯೆಯ ಕುರಿತು ವಿವರವಾಗಿ ಹೇಳಲು ಕೇಳಿಕೊಳ್ಳುತ್ತೇನೆ.
ಖಚಿಡಿತ. ನಾನೂ ಪಂಚಾಯತ್ ಲೀಡರ್, ರಾಮಸ್ವಾಮಿ ಅಂಕಲ್ ಮತ್ತು ಇತರರೊಂದಿಗೆ ಮಾತನಾಡುತ್ತೇನೆ ಮತ್ತು ನಿನ್ನ ಸ್ನೇಹಿತನೊಂದಿಗೆ ಒಚಿದು ಸಭೆಗೆ ವ್ಯವಸ್ಥೆಮಾಡುವೆ.

ಕಥಿರೇಸನ್ ಪಂಚಾಯತ ಲೀಡರ್ ಮತ್ತು ಇತರರನ್ನು ಭೇಟಿಯಾಗುತ್ತಾರೆ, ಮುತ್ತೂ ಬಂದ ವಿಷಯವನ್ನು ಮತ್ತು ಮುಂಬರುತ್ತಿರುವ ಘಟಕದ ಕುರಿತು ಅವನಿಗಿರುವ ಆತಂಕಗಳನ್ನು ಹೇಳುತ್ತಾರೆ.




ಅವನಿಗೆ ಕೆಲವು ಪ್ರಶ್ನೆಗಳಿವೆ, ಅವುಗಳಿಗೆ ನನ್ನ ಹತ್ತಿರ ಉತ್ತರಗಳಿಲ್ಲ.
ಓಹ್! ಮುತ್ತೂ ಬಂದಿದ್ದಾನೆಯೇ.. ಹೇಗಿದ್ದಾನೆ? ಅವನನ್ನು ನೋಡದೇ ಬಹಳ ದಿನಗಳಾದವು!
ಮುತ್ತೂ ಚೆನ್ನಾಗಿದ್ದಾನೆ..
ನಿನ್ನ ಮಗ ಹೇಗಿದ್ದಾನೆ? ಪಟ್ಟಣದಲ್ಲಿ ಸಂತೋಷವಾಗಿದ್ದಾನೆಯೇ? ಮತ್ತೆ.. ಏನವನ ಪ್ರಶ್ನೆಗಳು?
ಅವನು ಘಟಕದ ಸ್ಥಳದ ಕುರಿತು ಕೇಳುತ್ತಿದ್ದ...
..ಮತ್ತು, ನಮ್ಮ ಜೀವಾನದಾರಕ್ಕೆ ಯಾವುದೇ ರೀತಿಯಲ್ಲಿ ಬಾಧೆ ಉಂಟಾಗುತ್ತದೆಯೇ ಎಚಿದು ಕೇಳಿದ..


...ಪ್ರವರ್ತಕ ಸರಕಾರದ ಮಾರ್ಗಸೂಚಿಗಳನ್ನು ಅನುಸರಿಸುವ ಅಗತ್ಯವಿದೆಯಂತೆ ......
ಘಟಕ ಪ್ರಾರಂಭಿಸುವ ಮೊದಲು,..
ಓಹ್! ಈಗ ನಾವು ಗಮನಿಸಬೇಕಾದ ಮತ್ತು \ ತಿಳಿದುಕೊಳ್ಳಬೇಕಾದ ಅನೇಕ ವಿಷಯಗಳಿವೆ ಅರ್ಥವಾಯಿತು....,...
-... ಹೌದಲ್ಲವೇ? ನನಗೆ ಇವ್ಯಾವವೂ ತಿಳಿದಿರಲಿಲ್ಲ. ಈ ಪ್ರಶ್ನೆಗಳಿಗೆ ನನ್ನ ಹತ್ತಿರವೂ ಯಾವುದೇ ಉತ್ತರಗಳಿಲ್ಲ.
ಇವು ನಿಜಕ್ಕೂ ಕಾಳಜಿವಹಿಸಬೇಕಾದ ವಿಷಯಗಳಾಗಿವೆ ಅನಿಸುತ್ತದೆ...
ನಾವೇನು ಮಾಡಬೇಕು?


ಮುತ್ತೂ ಹೇಳಿದ, ಅವನ ರೂಮ್-ಮೇಟ್ ಜಯಪ್ರಸಾದ ಓದಿದು ಎನ್‌ಜಿಓ ದಲ್ಲಿ ಕೆಲಸಮಾಡುತ್ತಾನಂತೆ...
?!!
... ಅದು ಈ ಕ್ಷೇತ್ರದಲ್ಲಿ ಕೆಲಸ ಮಾಡುತ್ತ ದೆಯಂತೆ ...
ಮತ್ತೂ ನಾವು ಒಪ್ಪಿದಲ್ಲಿ ಅವನು ಜಯಪ್ರಕಾಶನನ್ನು ಇಲ್ಲಿಗೆ ಬಂದು ಪ್ರಕ್ರಿಯೆಗಳನ್ನು ವಿವರಿಸಲು ಕೇಳಿಕೊಳ್ಳುತ್ತಾನಂತೆ...


–-- ಎಲ್ಲರೂ ಒಮ್ಮೆಲೇ
ಅದೇ ಉತ್ತಮ!
ದಯವಿಟ್ಟು ಮುತ್ತೂಗೆ ಅವನ ಸ್ನೇಹಿತನನ್ನು ತಕ್ಷಣ ಕರೆಸಲು ಹೇಳು ...
... ಅಗತ್ಯವಾದರೆ ನಾವು ಅವನ ಪ್ರಯಾಣ ಮತ್ತು ಊಟ–ತಿಂಡಿಯ ಖರ್ಚನ್ನು ನೋಡಿಕೊಳ್ಳೋಣ.
ಅದರ ಅಣತ್ಯವಿಲ್ಲ. ಮುತ್ತೂ ಇದರ ಕಾಳಜಿವಹಿಸುತ್ತಾನೆ......
...-ನಾವು ಮುಂದಿನ ರವಿವಾರಕ್ಕೆ ಯೋಜಿಸೋಣವೇ?


ನಾವು ಪಂಚಾಯತ ಸದಸ್ಯರನ್ನು ಮತ್ತು ಮಹಿಳಾ ಸ್ವ-ಸಹಾಯ ಗುಂಪಿನ ಲೀಡರುಗಳನ್ನು ಸಹಿತ ಆಹ್ವಾನಿಸಬಹುದು...
..ಸಭೆಗೆ ನೀವೇನು ಅನ್ನುವಿರಿ?
ಖಚಿಡಿತ!

ಮುತ್ತೂ ತನ್ನ ಸ್ನೇಹಿತ ಜಯಪ್ರಸಾದನಿಗೆ ಕರೆಮಾಡುತ್ತಾನೆ ಮತ್ತು ಇಐಎ ವಿಧಾನಗಳನ್ನು ವಿವರಿಸಲು ಅವನನ್ನು ಗ್ರಾಮಕ್ಕೆ ಬರಲು ವಿನಂತಿಸುತ್ತಾನೆ.




..ನನಗನಿಸುತ್ತದೆ, ನೀನು ಅದನ್ನು ಪುನಃ ವಿವರಿಸಬೇಕಾಗುತ್ತದೆ, ಸ್ವಲ್ಪ ಹೆಚ್ಚು ವಿವರವಾಗಿ...
... ಅಂದರೆ, ನನ್ನ ತಂದೆ ಮತ್ತು ಅವರ ಸ್ನೇಹಿತರು ಅರ್ಥಮಾಡಿಕೊಳ್ಳ ಬಹುದು...
...-ನನ್ನ ಗ್ರಾಮದ ಸಮೀಪ ಒಚಿದು ಥರ್ಮಲ್ ವಿದ್ಯುತ್ ಘಟಕ ಪ್ರಾರಂಭಿಸುವ ಪ್ರಸ್ತಾಪವಿದೆ....
ನನ್ನ ಗ್ರಾಮಸ್ಥರು ಹರ್ಷಗೊಂಡಿದ್ದಾರೆ, ಏಕೆಂದರೆ ಪ್ರವರ್ತಕರು ಗ್ರಾಮದ ಪ್ರತಿ ಕುಟುಂಬಕ್ಕೆ ಒಚಿದು ಕೆಲಸ ನೀಡುವ ಆಶ್ವಾಸನೆ ನೀಡಿದ್ದಾರೆ....
ಆದರೆ ಅವರಿಗೆ ಘಟಕದ ಇತರ ಪರಿಣಾಮಗಳ ಕುರಿತು ತಿಳುವಳಿಕೆ ಇಲ್ಲ.
...ನನಗೆ ತಕ್ಷಣ ನಿನ್ನ ನೆನಪು ಬಂತು, ನೀನೇ ಇದಕ್ಕೆ ತಕ್ಕ ವ್ಯಕ್ತಿ ...


... ಅದಕ್ಕೆ ಒಳಗೊಂಡ ಪ್ರಕ್ರಿಯೆಗಳ ಕುರಿತು ಮಾತನಾಡಲು...
... ಅದರ ನೀತಿ ಮತ್ತು ನಿಯಮಾವಳಿಗಳನ್ನು ಅವರಿಗೆ ವಿವರಿಸಬಹುದು ...
...-ಸಾರ್ವಜನಿಕ ಸಮಾಲೋಚನೆ ಪ್ರಕ್ರಿಯೆ ಕುರಿತು ತಿಳಿಸಬಹುದು ......
ನಿನಗೆ ......ಸಾಧ್ಯವೇ?
ಈ ರವಿವಾರ ......ಬರಲು?
ಖಚಿಡಿತ, ಸಂತೋಷದಿಂದ ಬರುವೆ.

ಪಂಚಾಯತ ಕಚೇರಿಯ ಹೊರಗಿನ ಆಲದ ಮರದ ಕೆಳಗೆ ಸಭೆ.
ಜಯಪ್ರಸಾದ, ಮುತ್ತು, ಕಥಿರೇಸನ್, ರಾಮಸ್ವಾಮಿ, ಪಂಚಾಯತ ಲೀಡರ್ ಮತ್ತು 4 ಸದಸ್ಯರು, 4 ಮಹಿಳಾ ಸ್ವ-ಸಹಾಯ ಗುಂಪಿನ ಲೀಡರುಗಳು-ಜಯಪ್ರಸಾದ ಇಐಎ ವಿಧಿ-ವಿಧಾನಗಳನ್ನು ವಿವರಿಸುತ್ತಾನೆ.









ಮತ್ತು ನಮ್ಮ ಗ್ರಾಮಕ್ಕೆ ಉಂಟಾಗುವ ಅತ್ಯಂತ ಅನುಕೂಲಕರ ವಿಷಯವೆಂದರೆ–ಪ್ರತಿ ಕುಟುಂಬದ ಒಬ್ಬ ಸದಸ್ಯನಿಗೆ ಒಂದು ಕೆಲಸ ನೀಡಲಾಗುತ್ತದೆ.
ಎಲ್ಲರೂ
ಹೌದು, ಹೌದು, ಹೌದು
ನಾನೂ ಹೀಗೆ ವಿಚಾರ ಮಾಡುತ್ತಿದ್ದೆ, ಆದರೆ...
ಆದರೆ ಮುತ್ತೂ ಹೇಳುತ್ತಾನೆ, ಇದರಿಂದಾಗಿ ನಮ್ಮ ಜೀವನಾದರಕ್ಕೆ ಬಾಧಿಸಬಹುದಾದ ಇತರ ವಿಷಯಗಳಿವೆಯಂತೆ....
...ಅಚೆದರೆ, ದೀರ್ಘಾವಧಿಯಲ್ಲಿ ಬದುಕಿನ ಗುಣಮಟ್ಟ. ಅದನ್ನು ನಾವು ಈಣ ತಿಳಿದುಕೊಳ್ಳಬೇಕಾಗಿದೆ
ಹೌದು. ನಮ್ಮ ತಂದೆ ಹೇಳುತ್ತಿರುವುದು ನಿಜ.....


ನನಗೂ ಇದರ ಕುರಿತು
ಇತ್ತೀಚೆಗಷ್ಟೆ
ತಿಳಿದುಬಂದಿದೆ......
...- ಅದಕ್ಕಾಗಿಯೇ ನನ್ನ ಸ್ನೇಹಿತ
ಜಯಪ್ರಸಾದನಿಗೆ ಇಂದು ಇಲ್ಲಿಗೆ ಬರಲು ಹೇಳಿದ್ದು.
ಅವರು ಈ ಕ್ಷೇತ್ರದಲ್ಲಿಯೇ ಕೆಲಸಮಾಡುತ್ತಾರೆ ಮತ್ತು
ವಿಷಯದ ಕುರಿತು ಚೆನ್ನಾಗಿ ತಿಳಿದುಕೊಂಡಿದ್ದಾರೆ
... ಇವರು ನನ್ನ
ಸ್ನೇಹಿತ ಜಯಪ್ರಸಾದ್
ಎಲ್ಲರಿಗೂ ನಮಸ್ಕಾರ!
ಎಲ್ಲರೂ ಒಟ್ಟಾಗಿ
ನಮಸ್ಕಾರ
ನೀವು ಯಾರಾದರೂ “ಪರಿಸರ
ಅನುಮೋದನೆ”
ಕುರಿತು ಕೇಳಿದ್ದೀರಾ?


ಎಲ್ಲರೂ
ಇಲ್ಲ, ಇಲ್ಲ, ಇಲ್ಲ.
ಏನದು?
ಭಾರತ ಸರಕಾರ 39 ಕೈಗಾರಿಕ ಯೋಜನೆಗಳನ್ನು ಗುರುತಿಸಿದೆ, ಅವುಗಳೆಂದರೆ–
ಗಣಿ,
ಬಂದರು,
ಥರ್ಮಲ್ ವಿದ್ಯುತ್ ಘಟಕಗಳು, ಇತ್ಯಾದಿ...




* ENVIROENMENTAL IMPACT ASSESSMENT (EIA)



... ಅಂದರೆ, ಅಭಿವೃದ್ಧಿ ಚಟುವಟಿಕೆಗಳು ಪರಿಸರವನ್ನು ಕಲುಷಿತಗೊಳಿಸಬಾರದು...
... ಅಧಿಸೂಚನೆ ಪ್ರಕಾರ ಅನುಸರಿಸಿರುಸಿರುವುದನ್ನು ಪರಿಶೀಲನೆ ಮಾಡಿದ ನಂತರ ಮತ್ತು ಯೋಜನೆಯ ವರ್ಗದ ಆಧಾರದ ಮೇಲೆ ....
...ಪರಿಸರ ಮತ್ತು ಅರಣ್ಯಗಳು ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ (MoEF & CC) .....
जहाँ है हरियाली ।
वहाँ है खुशहाली ॥
Ministry of Environment, Forest and Climate Change
Government of India
सत्यमेव जयते
ಅಥವಾ ರಾಜ್ಯ ಪರಿಸರ ಪರಿಣಾಮ ಮೌಲ್ಯಮಾಪನ ಪ್ರಾಧಿಕಾರ (SEIAA) ಪರಿಸರ ಅನುಮೋದನೆಯ ಪತ್ರ (EC) ನೀಡುತ್ತದೆ.....
SEIAA
STATE ENVIRONMENTAL IMPACT ASSESSMENT AUTHORITY
सत्यमेव जयते
... ಇದರ ನಂತರವೇ ಯೋಜನಾ ಪ್ರವರ್ತಕ, ಯೋಜನೆಯನ್ನು ಸ್ಥಾಪಿಸಬಹುದು ಅಥವಾ ಪ್ರಾರಂಭಿಸಬಹುದು.


ಓಹ್.. ನಮಗಿದು ತಿಳಿದಿರಲೇ ಇಲ್ಲ......
ಅದಕ್ಕಾಗಿಯೇ ನಾನು ಇಚಿದು ಜಯಪ್ರಸಾದ್ ಅವರನ್ನು ಇಲ್ಲಿಗೆ ಕರೆದಿರುವುದು ...
ಅಷ್ಟೇ ಅಲ್ಲ, ಈತುವ ಯೋಜನೆಯನ್ನು ವಿಸ್ತರಿಸುವ ಅಥವಾ ನವೀಕರಿಸುವ ಮೊದಲು........
... ಅಥವಾ ಪ್ರಸ್ತುತ ಯೋಜನೆಯಲ್ಲಿ ಉತ್ಪನ್ನಗಳ ಮಿಶ್ರಣವನ್ನು ಬದಲಾಯಿಸಬೇಕಾದಲ್ಲಿ..
ಮತ್ತು ಅದರ ಚಟುವಟಿಕೆಗಳಿಗೂ ಪರಿಸರ ಅನುಮೋದನೆ ಪತ್ರ ಅಗತ್ಯವಾಗಿರುತ್ತದೆ....
ಹೌದೇ?


ಹೌದು, ನಾನು ಈ ಮೊದಲು, ಪರಿಸರ ಪರಿಣಾಮ ಮೌಲ್ಯಮಾಪನ ಅಧಿಸೂಚನೆ ಇಐಎ ಕುರಿತು ಹೇಳಿದ್ದೆ, ನೆನಪಿದೆಯೇ?
ಅದು ಏನು ಕಡ್ಡಾಯಗೊಳಿಸುತ್ತದೆ ಗೊತ್ತೇ?
Ministry of Environment, Forest and Climate Change
Government of India
Form I
Pre-feasibility report
ಯೋಜನಾ ಪ್ರವರ್ತಕ MoEF ಗೆ ಯೋಜನೆ ಅನುಮೋದನೆಗಾಗಿ ಅರ್ಜಿ ಸಲ್ಲಿಸಬೇಕು (ಅರ್ಜಿ ನಮೂನೆ I. ಪೂರ್ವಭಾವಿ ಕಾರ್ಯಸಾಧ್ಯತ ವರದಿ)
ಇಲ್ಲಿ ಒಂದು ಪರಿಣಿತ ಅಪ್ರೈಸಲ್ ಕಮಿಟಿ (EAC) ಇದ್ದು, ಪ್ರವರ್ತಕ ಯೋಜನೆ ಕುರಿತು ಒಂದು ಪ್ರಸ್ತಾವನೆಯನ್ನು ಈ ಕಮಿಟಿಗೆ ಸಲ್ಲಿಸಬೇಕು
Power Point Presentation
Ministry of Environment, Forest and Climate Change
Government of India
TOR
ನಂತರ MoEF ಪ್ರವರ್ತಕನಿಗೆ ಇಐಎ ತಯಾರಿಸಲು ಒಚಿದು ಪರೀಶೀಲನಾಂಶಗಳು (ToR) ನೀಡುತ್ತದೆ.
ಪ್ರವರ್ತಕ ನಂತರ, ಕರಡು ಇಐಎ ಪ್ರತಿಯನ್ನು MoEF ಗೆ ಮತ್ತು ರಾಜ್ಯ ಪರಿಸರ ಪರಿಣಾಮ ಮೌಲ್ಯಮಾಪನ ಪ್ರಾಧಿಕಾರಕ್ಕೆ (SEIAA) ಸಲ್ಲಿಸುತ್ತಾನೆ
DRAFT - EIA
SEIAA TAMIL NADU
STATE ENVIRONMENTAL IMPACT ASSESSMENT AUTHORITY


ನಂತರ ರಾಜ್ಯ ಪರಿಸರ ನಿಯಂತ್ರಣಾ ಮಂಡಳಿ (SPCB) ಸಾರ್ವಜನಿಕ ಸಮಾಲೋಚನೆಗಳನ್ನು ವ್ಯವಸ್ಥೆಗೊಳಿಸುತ್ತದೆ. (ಸಾರ್ವಜನಿಕ ಅಹವಾಲು ಮತ್ತು ಬರಹ ಪ್ರತಿಕ್ರಿಯೆ) ಮತ್ತು ವ್ಯವಹರಣೆಗಳನ್ನು MoEF ಗೆ ಸಲ್ಲಿಸುತ್ತದೆ.
ಇದನ್ನು ಅನುಸರಿಸಿ, ಪ್ರವರ್ತಕ ಅಚಿತಿಮ ಇಐಎ ಮತ್ತು ಅಂತಿಮ ಕಾರ್ಯಸಾಧ್ಯತ ವರದಿಗಳನ್ನು MoEF ಮತ್ತು CC ಗೆ ಸಲ್ಲಿಸುತ್ತಾರೆ.
Ministry of Environment, Forest and Climate Change
Government of India
Final EIA
Final Feasibility Report
MoEF ಮತ್ತು CC ಅಂತಿಮ ಇಐಎ ಪರೀಶೀಲನಾಂಶಗಳನ್ನು (ToR) ಪಾಲಿಸಿದೆಯೇ ಎಂದು ಪರಿಶೀಲಿಸುತ್ತದೆ
EACಗೆ ವಿಷಯವನ್ನು ಉಲ್ಲೇಖಿಸುತ್ತಾರೆ
Final EIA


EAC ಆಗ ದಾಖಲೆಗಳ ಅಪ್ರೈಸಲ್ ಪೂರ್ತಿಗೊಳಿಸುತ್ತದೆ ನಂತರ ಅನುಮೋದನೆ/ನಿರಾಕರಣೆಯನ್ನು MoEF ಮತ್ತು CC ಗೆ ಶಿಫಾರಸು ಮಾಡುತ್ತದೆ
... ಮತ್ತು ಅಂತಿಮವಾಗಿ, MoEF ಮತ್ತು CC ಪ್ರವರ್ತಕನಿಗೆ ಅನುಮೋದನೆ ಅಥವಾ ನಿರಾಕರಣೆ ಪತ್ರವನ್ನು ನೀಡುತ್ತದೆ.
ENVIRONMENTAL CLEARANCE
ENVIRONMENTAL CLEARANCE


ಇದರಲ್ಲಿ ಅನೇಕ ವಿಧಿ-ವಿಧಾನಗಳು ಒಳಗೊಂಡಿವೆ, ಅಲ್ಲವೆ?
ಹಾಗಿದ್ದರೆ, ಎಲ್ಲವೂ ನಿಯಮಾನುಸಾರದಂತೆ ನಡೆದರೆ ನಾವೇಕೆ ಚಿಂತೆ ಮಾಡಬೇಕು?
ಸಮಸ್ಯೆ ಇರುವುದೇ ಇಲ್ಲಿ. ಏಕೆಂದರೆ ಪ್ರವರ್ತಕ ಎಲ್ಲ ಅಗತ್ಯಗಳನ್ನು ಪಾಲಿಸುವ ಸಾಧ್ಯತೆ ಕಡಿಮೆಯಾಗಿರುತ್ತದೆ...
-ಹೀಗಾಗಿ ನಾವು ಎಚ್ಚರಿಕೆ ವಹಿಸದಿದ್ದರೆ , ಮುಂದೆ ದೊಡ್ಡ ಸಮಸ್ಯೆಯಲ್ಲಿ ಸಿಲುಕುತ್ತೇವೆ.
ಪಂಚಾಯತ್ ಲೀಡರ್ ಚಹಾ ಮತ್ತು ಬಿಸ್ಕತ್ತುಗಳನ್ನು ಜಯಪ್ರಸಾದನಿಗೆ ನೀಡುತ್ತಾನೆ.
ಆದ್ದರಿಂದ ನಾವೇನು ಮಾಡಬೇಕು?
ನಾನು ಇಐಎ ಕೆಳಗೆ ಸಾರ್ವಜನಿಕ ಅಹವಾಲು ಕುರಿತು ಒಂದು ಅಂಶ ಹೇಳಿದ್ದೆ. ಇಲ್ಲಿ ನಾವು ಸಕ್ರಿಯವಾಗಿ ಭಾಗವಹಿಸಬಹುದು ಮತ್ತು ನಮ್ಮ ವಿಚಾರಗಳನ್ನು ಮಂಡಿಸಬಹುದು.


ಸಾರ್ವಜನಿಕ ಅಹವಾಲು ಎಂದರೇನು?
ಸಾರ್ವಜನಿಕ ಅಹವಾಲು ಒಚಿದು ಕಡ್ಡಾಯ ಸಭೆಯಾಗಿದ್ದು, ಇದನ್ನು ಎಲ್ಲ EC ಅಣತ್ಯವಿರುವ ಚಟುವಟಿಕೆಗಳಿಗೆ (39 ಯೋಜನೆಗಳಿಗೆ) ಸರಕಾರಿ ಅಧಿಕಾರಿಗಳು ನಡೆಸಬೇಕು.
...ಇಲ್ಲಿ ಯೋಜನಾ ಪ್ರವರ್ತಕ ಯೋಜನೆಯ ಕುರಿತು ಉಪಸ್ಥಿತರಿರುವ ಜನರಿಗೆ ವಿವರಣೆ ನೀಡುತ್ತಾನೆ. ಇದನ್ನು ಸ್ಥಳೀಯ ಜನರ ಅಭಿಪ್ರಾಯ ಕೇಳಲು ನಡೆಸುವುದು.
... ಮತ್ತು ಆಸಕ್ತ ನಾಗರಿಕ ಸಮಾಜ ಸಂಸ್ಥೆಗಳು....
...ಯೋಜನೆಯಿಂದ ಸಮುದಾಯಗಳ, ಜೀವಿಗಳ ಮತ್ತು ಸುತ್ತಮುತ್ತಲಿನ ಪ್ರದೇಶದ ಮೇಲೆ ಆಗುವ ಪರಿಣಾಮಗಳಿಗೆ ಸಂಬಂಧಿಸಿದಂತೆ ...
ಇದನ್ನು ಎಲ್ಲಿ ನಡೆಸಲಾಗುತ್ತದೆ?


ಸಾರ್ವಜನಿಕ ಅಹವಾಲನ್ನು ಯೋಜನಾ ಸ್ಥಳದ ಸಮೀಪದಲ್ಲಿ ನಡೆಸಲಾಗುತ್ತದೆ
ಹೆಚ್ಚಾಗಿ 1 ಕಿ.ಮಿ ವ್ಯಾಪ್ತಿಯೊಳಗೆ
ಸಾರ್ವಜನಿಕ ಅಹವಾಲಿಗೆ ಯಾವುದೇ ಸೂಕ್ತ ಸ್ಥಳ 1 ಕಿ.ಮಿ. ವ್ಯಾಪ್ತಿಯೊಳಗೆ ಲಭ್ಯವಿರದಿದ್ದರೆ, ಆಗ ಯೋಜನಾ ಸ್ಥಳದ ಅತ್ಯಂತ ಸಮೀಪದಲ್ಲಿ ಲಭ್ಯವಿರುವ ಸ್ಥಳದಲ್ಲಿ ನಡೆಸಲಾಗುತ್ತದೆ.....
ಉದಾಹರಣೆಗೆ: ಎರಡು ಕಿ.ಮಿ. ವ್ಯಾಪ್ತಿಯ ಒಳಗೆ ಸೂಕ್ತ ಸ್ಥಳ ಲಭ್ಯವಿದ್ದರೆ, SPCB ದೂರದಲ್ಲಿನ ಬೇರೆ ಯಾವುದೋ ಸ್ಥಳವನ್ನು ಆಯ್ಕೆಮಾಡಲಾಗುವುದಿಲ್ಲ.
NH 67 EXTN
MADURAI
39
ಸರಿ, ಆದರೆ ಸಾರ್ವಜನಿಕ ಅಹವಾಲು ಸ್ಥಳದ ಕುರಿತು ನಾವು ಹೇಗೆ ತಿಳಿದುಕೊಳ್ಳಬಹುದು?
30 ದಿನಕ್ಕಿಂತ ಮೊದಲು, SPCB ಸಾರ್ವಜನಿಕ ಅಹವಾಲು ಸ್ಥಳದ ಕುರಿತು ಒಂದು ಇಂಗ್ಲೀಷ್ ದಿನಪತ್ರಿಕೆ ಮತ್ತು ಒಂದು ಸ್ಥಳೀಯ ಭಾಷೆಯ ದಿನಪತ್ರಿಕೆಯಲ್ಲಿ ವ್ಯಾಪಕವಾಗಿ ಪ್ರಚಾರಮಾಡುತ್ತದೆ.
தினகரன்
RAJASTAN PATRIKA
राजस्थान पत्रिका
Malayala Manorama


ದಿನ ಪತ್ರಿಕೆ ತಲುಪದ ಸ್ಥಳಗಳಲ್ಲಿ, ವಿವರಗಳನ್ನು ರೇಡಿಯೋ/ಟಿವಿ. ಅಥವಾ ಡಂಗುರ ಬಾರಿಸುವ ಮೂಲಕ ಜಾಹೀರುಪಡಿಸಲಾಗುತ್ತದೆ.
ಓಹ್!... ನಾನು ಸಾರ್ವಜನಿಕ ಅಹವಾಲಿಗೆ ಹಾಜರಾಗುವ ವೊದಲು ಪೂರ್ವ-ಸಿದ್ಧತೆ ಮಾಡಿಕೊಳ್ಳಬೇಕೆ?
ಒಳ್ಳೆಯ ಪ್ರಶ್ನೆ! ಮುಖ್ಯವಾಗಿ ಸಾರ್ವಜನಿಕ ಅಹವಾಲಿಗೆ ಹಾಜರಾಗುವ ಮುನ್ನ ನೀವು ಫಾರ್ಮ್ ನಂ-1ನ್ನು ಪಡೆದು ಓದಬೇಕು,
ಯೋಜನಾ ಪ್ರವರ್ತಕನು ಸಲ್ಲಿಸಿರುವ ಪೂರ್ವಭಾವಿ ಕಾರ್ಯಸಾಧ್ಯತ ವರದಿ, ToR ಮತ್ತು ಕರಡು ಇಐಎ ಗಳನ್ನು ಓದಬೇಕು..
ಯೋಜನೆಯ ಪೂರ್ತಿ ವಿವರಗಳನ್ನು ತಿಳಿದುಕೊಳ್ಳಲು.
ಫಾರ್ಮ-1? ಅದರಲ್ಲಿ ಏನು ಕೊಡಲಾಗಿರುತ್ತದೆ?


ಪ್ರಸ್ತುತ ಭೂಬಳಕೆ, ಸರ್ವೆ ನಂಬರುಗಳು, ನೈಸರ್ಗಿಕ ಸಂಪನ್ಮೂಲಗಳ ಬಳಕೆ, ಘಟಕದ ಕಾರ್ಯ ಚಟುವಟಿಕೆ– ಇವು ಸ್ವಾದೀನ ಪಡಿಸಿಕೊಳ್ಳಲಿರುವ ಭೂಮಿಯ ಕುರಿತು ಕಲ್ಪನೆ ನೀಡುತ್ತದೆ...
ಸಮುದಾಯ ಮತ್ತು ಸುತ್ತಮುತ್ತಲಿನ ಪ್ರದೇಶದ ಮೇಲೆ ಘಟಕದಿಂದ ಉಂಟಾಗುವ ಪರಿಣಾಮಗಳ ಕುರಿತು ಕಲ್ಪನೆ ನೀಡುತ್ತವೆ.
ಸರಿ, ಪೂರ್ವ–ಕಾರ್ಯಗತ ವರದಿಯನ್ನು ನಾನು ಏಕೆ ಓದಬೇಕು?
ಆಪತ್ತಾಗಿರುವ ಮಾಲಿನ್ಯಕಾರಕಗಳು, ಯೋಜನಾ ಗಾತ್ರ, ಯೋಜನಾ ವೆಚ್ಚ
ಮತ್ತು ಯೋಜನಾ ಪ್ರವರ್ತಕರಿಂದ ಯೋಜನೆಯಲ್ಲಿ ನಿಗದಿಪಡಿಸಿದ ಪರಿಸರ ಉಪಶಮನದ ವೆಚ್ಚ.....ಸಾಮಾಜಿಕ–ಆರ್ಥಿಕ ಉಪಶಮನ ವೆಚ್ಚಗಳನ್ನು ಇದರಿಂದ ತಿಳಿದುಕೊಳ್ಳಬಹುದು.


ನಾನು ಸಾರ್ವಜನಿಕ ಅಹವಾಲಿಗೆ ಹಾಜರಾಗುವುದು ಮತ್ತು ಲಿಖಿತ ಪ್ರತಿಕ್ರಿಯೆ ಕಳುಹಿಸುವುದು ಎರಡನ್ನೂ ಮಾಡಬಹುದೆ?
ಹೌದು. ನೀವು ಮಾಡಬಹುದು.
ಒಚಿದು ಚುರುಕು ಪ್ರಶ್ನೆ ಜಯಪ್ರಸಾದ್.....
ಕೇಳಿ ಮುತ್ತು......
ನನಗೆ ದಾಖಲೆಗಳನ್ನು ತಿಳಿದುಕೊಳ್ಳುವ ಪರಿಣಿತಿ ಇಲ್ಲ, ಆದರೂ ನಾನು ಸಾರ್ವಜನಿಕ ಅಹವಾಲಿನಲ್ಲಿ ಭಾಗವಹಿಸ ಬಯಸುತ್ತೇನೆ.. ಏನು ಮಾಡಬೇಕು?
ಅದು ಸುಲಭ! ನೀನು ಪರಿಸರವಾದಿ ಗುಂಪಿನಿಂದ ಮತ್ತು ಈಗಾಗಲೇ ಈ ಕ್ಷೇತ್ರದಲ್ಲಿ ಪರಿಣಿತಿಹೊಂದಿದವರಿಂದ ಮಾಹಿತಿ ಪಡೆಯಬಹುದು
ಮತ್ತು ವಿಷಯ ತಿಳುವಳಿಕೆ ಇರುವ ಯಾವುದೇ ವ್ಯಕ್ತಿಯಿಂದ ಮಾಹಿತಿ ಪಡೆಯಬಹುದು ಮತ್ತು ಭಾಗವಹಿಸಬಹುದು......


ಓಹ್! ಸರಿ. ನಾನು ಆ ಸ್ಥಳದವನಲ್ಲದಿದ್ದರೆ, ಆಗಲೂ ನಾನು ಸಾರ್ವಜನಿಕ ವಿಚಾರಣೆಯಲ್ಲಿ ಭಾಗವಹಿಸಬಹುದೇ?
ಖಚಿಡಿತ. ಎಲ್ಲಿಯವರೆಗೆ ನೀವು ನ್ಯಾಯಸಮ್ಮತವಾದ ಸಾಮಾಜಿಕ ಮತ್ತು ಪರಿಸರ ಕಾಳಜಿ ಹೊಂದಿರುವಿರೋ ಅಲ್ಲಿಯ ವರೆಗೆ ನೀವು ಭಾಗವಹಿಸಬಹುದು.
ಎರಡು ಯೋಜನೆಗಳ ಸಾರ್ವಜನಿಕ ಅಹವಾಲುಗಳನ್ನು ಸಮಾನಾಂತರವಾಗಿ ಏಕ ಕಾಲಕ್ಕೆ ಮತ್ತು ಒಂದೇ ಸ್ಥಳದಲ್ಲಿ ನಡೆಸಬಹುದೇ?
ಇಲ್ಲ. ನಿಯಮಗಳ ಪ್ರಕಾರ ಇ ದಕ್ಕೆ ಅನುಮತಿ ಇಲ್ಲ.
ಸಾರ್ವಜನಿಕ ಅಹವಾಲನ್ನು ಮುಂದೂಡಬಹುದೇ?
ಹೌದು. ಕೆಲವು ತುರ್ತು ಪರಿಸ್ಥಿತಿಗಳಲ್ಲಿ ಅಥವಾ ಪ್ರಕ್ರಿಯೆಯನ್ನು ಪಾಲಿಸಿಲ್ಲವೆಂದು ಸಾರ್ವಜನಿಕರು ಪ್ರತಿಭಟನೆ ನಡೆಸಿದಾಗ...


ಸಾರ್ವಜನಿಕ ಅಹವಾಲನ್ನು ಮುಂದಿನ ದಿನಾಂಕಕ್ಕೆ \ ಮುಂದೂಡಬಹುದು.
ಕ್ಷಮಿಸಿ ಜಯಪ್ರಸಾದ್, ನಾವು ಬಹಳಷ್ಟು ಪ್ರಶ್ನೆಗಳನ್ನು ಕೇಳಿ ನಿಮಗೆ ಬೇಸರ ಉಂಟು ಮಾಡುತ್ತಿದ್ದೇವೆ.
ಖಚಿಡಿತ ಇಲ್ಲ, ಇದು ನಿಜಕ್ಕೂ ನನ್ನ ಸಂತೋಷ! ಬಹಳಷ್ಟು ಜನರು ವಿಷಯದಲ್ಲಿ ಆಸಕ್ತಿ ತೋರುತ್ತಿರುವುದು ನನಗೆ ಸಂತೋಷ ತಂದಿದೆ.
ಸಾರ್ವಜನಿಕ ಅಹವಾಲಿನಲ್ಲಿ ಸಮಯ ನಿರ್ಬಂಧ ಅಥವಾ ಎಷ್ಟು ಜನರು ಮಾತನಾಡಬಹುದು ಎಂಬುದಕ್ಕೆ ಮಿತಿ ಇರುತ್ತದೆಯೇ ?
ಇಲ್ಲ. ಅದಕ್ಕೆ ಮಿತಿಗಳಿಲ್ಲ
ಯೋಜನಾ ಸ್ಥಳ ಎರಡು ರಾಜ್ಯಗಳ ಗಡಿಯಲ್ಲಿದ್ದರೆ ಸಾರ್ವಜನಿಕ ಅಹವಾಲು ಎಲ್ಲಿ ನಡೆಸಬೇಕು?


ಇಚಿತಹ ಪ್ರಸಂಗಗಳಲ್ಲಿ, ಅಹವಾಲನ್ನು ಎರಡೂ ರಾಜ್ಯಗಳಿಗೆ ಸಂಬಂಧಿಸಿದ SPCB ಗಳು ಜಂಟಿಯಾಗಿ ಎರಡು ರಾಜ್ಯಗಳಲ್ಲೂ ಆಯೋಜಿಸುತ್ತವೆ.
ಒಚಿದು ಯೋಜನೆಯ ಕುರಿತು ಯಾರು ಲಿಖಿತ ಪ್ರತಿಕ್ರಿಯೆಗಳನ್ನು ಕಳುಹಿಸಬಹುದು?
ಯೋಜನೆಯಲ್ಲಿ ಪರಿಸರಕ್ಕೆ ಸಂಬಂಧಿಸಿದ ಸಮಂಜಸ ಪಾಲನ್ನು ಹೊಂದಿದ ಯಾರು ಬೇಕಾದರೂ ಲಿಖಿತ ಪ್ರತಿಕ್ರಿಯೆ ಕಳುಹಿಸಬಹುದು.
ಸಾರ್ವಜನಿಕ ಆಹವಾಲು ಇಲ್ಲದೇ ಯೋಜನೆಗೆ ಇಸಿ ನೀಡಿದಲ್ಲಿ ನಾನೇನು ಮಾಡಬೇಕು?
ಆಣ 30 ದಿನಗಳ ಒಳಗಾಗಿ ನೀವು ಕೇಸು ದಾಖಲಿಸಬಹುದು
ಇಸಿ ವಿರುದ್ಧ ರಾಷ್ಟ್ರೀಯ ಹಸಿರು ನ್ಯಾಯಪೀಠ (NGT) ದಲ್ಲಿ.


ಓಹ್.... ಇದೇನಿದು ರಾಷ್ಟ್ರೀಯ ಹಸಿರು ನ್ಯಾಯಪೀಠ (NGT)?
ಎನ್‌ಜಿಟಿ ಒಂದು ನ್ಯಾಯಾಲಯ.
NATIONAL GREEN TRIBUNAL
NEW DELHI
National Green Tribunal
ಇದನ್ನು ಪರಿಸರ ರಕ್ಷಣೆ, ಅರಣ್ಯ ಸಂರಕ್ಷಣೆ ಮತ್ತು ಇತರ ನೈಸರ್ಗಿಕ ಸಂಪನ್ಮೂಲಗಳಿಗೆ ಸಂಬಂಧಿಸಿದ ಪ್ರಕರಣಗಳಿಗೆ ನ್ಯಾಯ ತೀರ್ಮಾನ ಮಾಡಲು ಸ್ಥಾಪನೆಮಾಡಲಾಗಿದೆ


ಇಸಿ ಪಡೆಯುವ ಮೊದಲು ಯೋಜನಾ ಪ್ರವರ್ತಕ ಯೋಜನಾ ಭೂಮಿಯಲ್ಲಿ ಯಾವುದೇ ಚಟುವಟಿಕೆ ನಡೆಸಬಹುದೇ?
ಅತಿಕ್ರಮಣ ತಡೆಗಟ್ಟಲು ಸೈಟ್‌ಗೆ ಬೇಲಿ ಹಾಕಬಹುದು ಮತ್ತು...
ಗಾರ್ಡ್‌ಗಳಿಗೆ ತಾತ್ಕಾಲಿಕ ಶೆಡ್ ಕಟ್ಟಬಹುದು. ಇಸಿ ಪಡೆಯುವ ಮೊದಲು ಈ ಎರಡು ಚಟುವಟಿಕೆ ಮಾತ್ರ ನಡೆಸಬಹುದು
ಒಟ್ಟು ಯೋಜನೆ ಇಸಿ ಪಡೆದುಕೊಳ್ಳಲು ಸಾಮಾನ್ಯವಾಗಿ ಎಷ್ಟು ಸಮಯ ತೆಗೆದುಕೊಳ್ಳುತ್ತದೆ?
ಇದು ಘಟಕದ ಗಾತ್ರದ ಮೇಲೆ ಅವಲಂಬಿಸುತ್ತದೆ. ಸಾಮಾನ್ಯವಾಗಿ 1 ರಿಂದ 1½ ವರ್ಷ ತೆಗೆದುಕೊಳ್ಳುತ್ತದೆ.
ಓಹ್! ಅಷ್ಟೊಂದು ಸಮಯವೇ? ಸರಿ, ಒಮ್ಮೆ ಇಸಿ ನೀಡಿದಲ್ಲಿ ಪ್ರವರ್ತಕ ಘಟಕದ ನಿರ್ಮಾಣವನ್ನು ಪ್ರಾರಂಭಿಸಬಹುದೇ?


ಇಲ್ಲ! ಯೋಜನಾ ಪ್ರವರ್ತಕ ಸಂಬಂಧಿಸಿದ SPCBಗೆ ಸ್ಥಾಪನೆಗಾಗಿ ಒಪ್ಪಿಗೆ ನೀಡಲು ಅರ್ಜಿಸಲ್ಲಿಸಬೇಕು. ಅದನ್ನು ಪಡೆದ ನಂತರ ಯೋಜನೆಯ ನಿರ್ಮಾಣ ಪ್ರಾರಂಭಿಸಬಹುದು.
ಯಾವ ಹಂತದಲ್ಲಿ ಯೋಜನಾ ಪ್ರವರ್ತಕ ಯೋಜನಾ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಬಹುದು?
ಭೂ ಸ್ವಾಧೀನತೆ ಯೋಜನಾ ಪ್ರವರ್ತಕ ಇಸಿಗೆ ಅರ್ಜಿ ಸಲ್ಲಿಸುವ ಮೊದಲೇ ಪ್ರಾರಂಭಗೊಳ್ಳಬಹುದು.
ಯೋಜನಾ ಪ್ರವರ್ತಕ ಯಾವ ಮತ್ತು ಯಾರ ಭೂಮಿಗಳನ್ನು ಸ್ವಾಧೀನ ಪಡಿಸಿಕೊಂಡಿದ್ದಾನೆ ಎಂಬ ವಿವರಗಳನ್ನು ನಾನು ಹೇಗೆ ಕಂಡುಕೊಳ್ಳಬೇಕು?
ಯೋಜನಾ ಪ್ರವರ್ತಕ ಈಗಾಗಲೇ ಸ್ವಾಧೀನ ಪಡಿಸಿಕೊಂಡ ಭೂ ವಿವರಗಳನ್ನು ಅವನ ಕರಡು ಇಐಎ ದಿಂದ ಕಂಡುಕೊಳ್ಳಬಹುದು
ಇಐಎ ವರದಿಯಿಂದ ಇತರ ಯಾವ ಯಾವ ವಿವರಗಳನ್ನು ನಾವು ಕಂಡುಕೊಳ್ಳಬಹುದು?


ಕರಡು EIA
ಕರಡು ಇಐಎ
ಯೋಜನಾ ವಿವರಣೆ
ಪರಿಸರದ ಮೂಲ ಆಧಾರ ಅಂಕಿ–ಸಂಖ್ಯೆ ಮಾಹಿತಿ
ಜನಾಂಗದ ಸಾಮಾಜಿಕ ಸ್ಥಿತಿ
ಭೂಗರ್ಭದ ವಿವರಗಳು
ಅದ್ಯಯನ ಪ್ರದೇಶದಲ್ಲಿರುವ ಪರಿಸರ ಸೂಕ್ಷ್ಮತೆಯ ಲಕ್ಷಣಗಳು
ನಿರೀಕ್ಷಿತ ಪರಿಸರ
ಯೋಜನೆಯ ಸಾಮಾಜಿಕ ಪ್ರಭಾವಗಳು
ಪರ್ಯಾಯ ಸಂಪನ್ಮೂಲಗಳ ವಿಶ್ಲೇಷಣೆಗಳು
ಉದ್ಯೋಗಾವಕಾಶಗಳು ಇತ್ಯಾದಿ ......
ಓಹ್! ಸರಿ, ಉದ್ಯೋಗ, ಸಿಎಸ್‌ಆರ್ ಮತ್ತು ಇತ್ಯಾದಿಗಳನ್ನು ಪ್ರಸ್ತುತ ಯೋಜನೆಯಲ್ಲಿ ಅನುಸರಿಸದಿದ್ದರೆ ನಾವು ಎಲ್ಲಿ ದೂರು ನೀಡಬೇಕು?
ನೀವು ಈ ವಿಷಯದ ಕುರಿತು MoEF ಮತ್ತು SPCB ಗೆ ದೂರು ನೀಡಬಹುದು.
EIA ವರದಿಯನ್ನು ಯೋಜನಾ ವಿಸ್ತಾರಕ್ಕಾಗಿಯೂ ತಯಾರಿಸಲಾಗುತ್ತದೆಯೆ?
ಹೌದು, ನಾನು ಈಗಾಗಲೇ ಹೇಳಿದಂತೆ ಇದು ವಿಸ್ತರಣೆಗಾಗಿಯೂ ಅಗತ್ಯವಾಗಿದೆ ಮತ್ತು ಇದನ್ನು ಸಾಮಾನ್ಯವಾಗಿ ಬ್ರೌನ್‌ಫಿಲ್ಡ್ EIA ಎಂದು ಕರೆಯಲಾಗುತ್ತದೆ.


ಇದು ಬೇಸ್‌ಲೈನ್ ಅಧ್ಯಯನದಲ್ಲಿ ಈಗಿರುವ ಉಪಶಮನ ಕ್ರಮಗಳ ಪರಿಣಾಮಕಾರತ್ವಗಳನ್ನು ಅನುಸರಣಾ ಸ್ಥಿತಿಗತಿಗಳು ಮತ್ತು ಸಮಗ್ರ ಪರಿಣಾಮ ಮೌಲ್ಯಮಾಪನದಲ್ಲಿ ನಿರೀಕ್ಷಿಸಲಾದ ಬದಲಾವಣೆ ಸೇರಿರುತ್ತವೆ.
ಓಹ್. . ಸರಿ, ನಾನು ಮರೆತಿದ್ದೆ..
ತೊಂದರೆ ಏನಿಲ್ಲ, ಪುನಃ ಕೇಳುವುದರಲ್ಲಿ ತಪ್ಪೇನಿಲ್ಲ.
ಇಸಿ ಹೊರತುಪಡಿಸಿ ಯೋಜನೆಗಾಗಿ ಬೇರೆ ಯಾವುದೇ ಅನುಮೋದನೆಗಳ ಅಗತ್ಯವಿದೆಯೇ?
ಹೌದು, ಆದರೆ ಇದು ಯೋಜನೆ ಮತ್ತು ಯೋಜನಾ ಸ್ಥಳದ ಮೇಲೆ ಅವಲಂಬಿತವಾಗುತ್ತದೆ.
ಯೋಜನೆ, ಸಮುದ್ರ ತಟಕ್ಕೆ ಅತ್ಯಂತ ಸಾಮೀಪ್ಯ ಹೊಂದಿದ್ದರೆ, ಕರಾವಳಿ ನಿಯಂತ್ರಣಾ ವಲಯದ (CRZ) ಅನುಮತಿಯ ಅಗತ್ಯವಿರುತ್ತದೆ.
ಅದರಂತೆ, ಯೋಜನೆ ಅರಣ್ಯ ಪ್ರದೇಶಕ್ಕೆ ಹೆಚ್ಚು ಸಾಮೀಪ್ಯ ಹೊಂದಿದ್ದರೆ, ಆಗ ಅರಣ್ಯ ಇಲಾಖೆಯ ಅನುಮೋದನೆ ಕಡ್ಡಾಯವಾಗಿರುತ್ತದೆ.



ಯೋಜನೆಯ ಇಸಿ ಪ್ರಕ್ರಿಯೆಯ ಉಲ್ಲಂಘನೆಯ ಕುರಿತು ದೂರುಗಳನ್ನು ಎಲ್ಲಿ ಸಲ್ಲಿಸಬೇಕು?
ಇಐಎ ಪ್ರಕ್ರಿಯೆಯ ಯಾವುದೇ ಉಲ್ಲಂಘನೆಯನ್ನು ಯಾವುದೇ ಹಂತದಲ್ಲಿ MoEF ಗೆ ವರದಿ ಮಾಡಬಹುದು ಯೋಜನೆಗೆ ಇಸಿ ನೀಡಲಾಗಿದ್ದಲ್ಲಿ.
ಉಲ್ಲಂಘನೆಗಾಗಿ ನೀವು ಆಗ ರಾಷ್ಟ್ರೀಯ ಹಸಿರು ನ್ಯಾಯ ಪೀಠದ ಎದುರು ಅದನ್ನು ಆಕ್ಷೇಪಣೆ ಮಾಡಬಹುದು.
ಓಹ್! ನೀವು ಸಮಯ ನೀಡಿದ್ದಕ್ಕೆ ತುಂಬ ಧನ್ಯವಾದಗಳು ಜಯಪ್ರಸಾದ್! ನೀವು ನಿಜಕ್ಕೂ ಕರುಣಾಳು.
ಬೇರೆ ಯಾವುದಾದರೂ ಪ್ರಶ್ನೆಗಳಿವೆಯೇ?
ಇಲ್ಲ, ನಾವಿಂದು ಬಹಳಷ್ಟು ತಿಳಿದುಕೊಂಡೆವು


ಈಣ ಅದರ ಪ್ರಕಟಣೆ ಹೊರಡಿಸಿದಾಗ ನಮ್ಮ ಜನರು ಸಾರ್ವಜನಿಕ ಅಹವಾಲಿನಲ್ಲಿ ಪರಿಣಾಮಕಾರಿಯಾಗಿ ಭಾಗವಹಿಸುವಂತೆ ನಾವು ಖಚಿತಪಡಿಸು ಕೊಳ್ಳುತ್ತೇವೆ.
.... ನಮಗೆ ಅದಕ್ಕೂ ಸಹಿತ ಮಾಹಿತಿಗಳ ಅಗತ್ಯವಿದೆ.
ಖಚಿಡಿತ ಸರ್, ಒಂದು ಆರೋಗ್ಯಕರ ಪರಿಸರವನ್ನು ಖಚಿತಪಡಿಸುವುದಕ್ಕಾಗಿ ನಾವು ನಿಮಗೆ ಎಲ್ಲ ರೀತಿಯಲ್ಲಿ ಸಹಾಯ ಮಾಡುತ್ತೇವೆ...
ಇದು ಇಬ್ಬರಿಗೂ ಅಂದರೆ ಇಚಿದಿನ ಮತ್ತು ಮುಂದಿನ ಪೀಳಿಗೆಗೆ ಪ್ರಯೋಜನಕಾರಿಯಾಗಿರುತ್ತದೆ.
ಧನ್ಯವಾದಗಳು – ಜಯಪ್ರಸಾದ!
ಪಂಚಾಯತ್ ಲೀಡರ್ ಅವರಿಂದ ಮುಂದಿನ ಪಂಚಾಯತ್ ಸಭೆಯ ದಿನಾಂಕವನ್ನು ಪ್ರಕಟಿಸಲಾಯಿತು, ಇದರೊಂದಿಗೆ ಸಭೆ ಮುಕ್ತಾಯವಾಯಿತು.

# ಅಗತ್ಯ ಸಂಪರ್ಕ ಮಾಹಿತಿ

## ಭಾರತ

ಅಧೀನ ಕಾರ್ಯದರ್ಶಿಗಳು,
ಮಾಹಿತಿ ಹಕ್ಕುಗಳ ವಿಭಾಗ
ಪರಿಸರ, ಅರಣ್ಯಗಳು ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ
ಇಂದಿರಾ ಪರ್ಯಾವರಣ ಭವನ, ಜೋರ್ ಬಾಗ್ ರಸ್ತೆ, ನವದೆಹಲಿ – 110003, ಭಾರತ
ಟೆಲಿಫೋನ್: 011–24696334 ಇಮೇಲ್ : usrti-mef@nic.in
ವೆಬ್: http://envfor.nic.in/

### ತಮಿಳನಾಡು

ರಾಷ್ಟ್ರೀಯ ಹಸಿರು ನ್ಯಾಯಪೀಠ
ಫರಿದ್‌ಕೋಟ್ ಹೌಸ್, ಕೋಪರ್ನಿಕಸ್ ಮಾರ್ಗ, ನವದೆಹಲಿ – 110 001, ಭಾರತ.
ಫೋನ್ : 011- -23043501
ಫ್ಯಾಕ್ಸ್ :011 -23077931
ಇ–ಮೇಲ್ : rg.ngt@nic.in
ವೆಬ್‌ಸೈಟ್ : http://www.greentribunal.gov.in/

ತಮಿಳನಾಡು ಮಾಲಿನ್ಯ ನಿಯಂತ್ರಣಾ ಮಂಡಳಿ
76, ಮೌಂಟ್ ಸಲಾಯಿ, ಗಿಂಡಿ, ಚೆನ್ನೈ–600 032,
ಫೋನ್ : 044-22353134-141
ಫ್ಯಾಕ್ಸ್ : 044-22353068
ಇ–ಮೇಲ್ : tnpcb@md3.vsnl.net.in
ವೆಬ್‌ಸೈಟ್ : http://www.tnpcb.gov.in/

ರಾಜ್ಯ ಪರಿಸರ ಪರಿಣಾಮ ಮೌಲ್ಯಮಾಪನ ಪ್ರಾಧಿಕಾರ (SRIAA)
3ನೇ ಮಹಡಿ, ಪನಗಲ್ ಮಾಳಿಗೈ, ನಂ.1, ಜೀನಿಸ್ ರೋಡ್, ಸೈದಾಪೇಟ್, ಚೆನ್ನೈ – 600 015.
ಫೋನ್ : +91 44 24359970
ಫೋನ್ : +91 44 24359970
ಇ–ಮೇಲ್ : cmantnseiaa@yahoo.com
ವೆಬ್‌ಸೈಟ್ : http://www.seiaa.tn.gov.in/

### ಕರ್ನಾಟಕ

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣಾ ಮಂಡಳಿ
"ಪರಿಸರ ಭವನ", #49,4ನೇ ಮತ್ತು 5ನೇ ಮಹಡಿ, ಚರ್ಚ್ ರಸ್ತೆ, ಬೆಂಗಳೂರು – 560001
ಫೋನ್ : 080-25881383/25589112/25889113/25586520
ಫ್ಯಾಕ್ಸ್ : 25586321
ಇ–ಮೇಲ್ : chairman@kspcb.gov.in
ವೆಬ್‌ಸೈಟ್ : http://kspcb.kar.nic.in/

ರಾಜ್ಯ ಮಟ್ಟದ ಪರಿಸರ ಪರಿಣಾಮ ಮೌಲ್ಯಮಾಪನ ಪ್ರಾಧಿಕಾರ (SRIAA)
7ನೇ ಮಹಡಿ, ಎಮ್.ಎಸ್ ಬಿಲ್ಡಿಂಗ್ 4ನೇ ಹಂತ, ಬೆಂಗಳೂರು, ಕರ್ನಾಟಕ.
ಫೋನ್ : 080-22032497
ಫ್ಯಾಕ್ಸ್ : 080-2225543377
ಇ-ಮೇಲ್ : mseiaakarnataka@gmail.com
ವೆಬ್‌ಸೈಟ್ : http://seiaa.kar.nic.in/

## ಆಂಧ್ರಪ್ರದೇಶ

ಆಂಧ್ರಪ್ರದೇಶ ಮಾಲಿನ್ಯ ನಿಯಂತ್ರಣಾ ಮಂಡಳಿ
ಪರ್ಯಾವರಣ ಭವನ,
ಎ III, ಇಂಡಸ್ಟ್ರಿಯಲ್ ಎಸ್ಟೇಟ್, ಸನತ್‌ನಗರ,
ಹೈದರಾಬಾದ – ಆಂಧ್ರಪ್ರದೇಶ
ಫೋನ್ : 040 -2381 5630
ಇ-ಮೇಲ್ : eew_ss@pcbap.gov.in
ವೆಬ್‌ಸೈಟ್ : http://appchap.nic.in

ರಾಜ್ಯ ಮಟ್ಟದ ಪರಿಸರ ಪರಿಣಾಮ ಮೌಲ್ಯಮಾಪನ ಪ್ರಾಧಿಕಾರ (SRIAA)
ಎ3,ಇಂಡಸ್ಟ್ರಿಯಲ್ ಎಸ್ಟೇಟ್, ಸನತ್‌ನಗರ, ಹೈದರಾಬಾದ್ - 500018
ಫೋನ್ : 040 - 23815630,23887503
ಫ್ಯಾಕ್ಸ್ : 040-23815631
ಇ-ಮೇಲ್ : jcee_eo@pcb.ap.gov.in
ವೆಬ್‌ಸೈಟ್ : http://appcbap.nic.in/

## ಕೇರಳ

ಕೇರಳ ರಾಜ್ಯ ಮಾಲಿನ್ಯ ನಿಯಂತ್ರಣಾ ಮಂಡಳಿ,
ಪಟ್ಟಂ ಪಿ.ಓ, ತಿರುವನಂತಪುರಮ್ – 695 004
ಫೋನ್ : 0471-2318153, 54,55,56, 2312910
ಇ-ಮೇಲ್ : sajeevanpcb@yahoo.co.in
ವೆಬ್‌ಸೈಟ್ : http://www.keralapcb.nic.in/

ರಾಜ್ಯ ಮಟ್ಟದ ಪರಿಸರ ಪರಿಣಾಮ ಮೌಲ್ಯಮಾಪನ ಪ್ರಾಧಿಕಾರ (SRIAA)
ಪರಿಸರ ಮತ್ತು ಹವಾಮಾನ ಬದಲಾವಣೆ ಸಚಿವಾಲಯ
ಪಲ್ಲಿಮುಕ್ಕು, ಪೆಟ್ಟ ಪಿ.ಓ, ತ್ರಿವೇಂಡ್ರಂ – 695024
ಫೋನ್ : **91471-2742264(ಕಚೇರಿ)**
ಫ್ಯಾಕ್ಸ್ : **00471-2742554(ಫ್ಯಾಕ್ಸ್)**
ಇ-ಮೇಲ್ : environmentdirectorate@gmail.com
ವೆಬ್‌ಸೈಟ್ : www.seiaakerala.org

## ನಾಗರಿಕ ಗ್ರಾಹಕ ಮತ್ತು ನಾಗರಿಕ ಕ್ರಿಯಾ ಗುಂಪು (ಸಿಎಜಿ),

ಒಂದು ಲಾಭ ರಹಿತ, ರಾಜಕೀಯುವಲ್ಲದ, ವೃತ್ತಿಪರ ಸಂಸ್ಥೆಯಾಗಿದ್ದು, ಪರಿಸರ ಹಾಗೂ ಗ್ರಾಹಕ ಸಮಸ್ಯೆಗಳಿಗೆ ಸಂಭಂದಿಸಿದಂತೆ ನಾಗರಿಕ ಹಕ್ಕುಗಳನ್ನು ರಕ್ಷಿಸುವ ಮತ್ತು ಪಾರದರ್ಶಕ, ಉತ್ತರದಾಯಿತ್ವ ಮತ್ತು ಪಾಲ್ಗೊಳ್ಳುವಿಯ ನಿರ್ಧಾರ ಒಳಗೊಂಡ ಉತ್ತಮ ಆಡಳಿತವನ್ನು ಪ್ರೋತ್ಸಾಹಿಸುವತ್ತ ಕೆಲಸಮಾಡುತ್ತದೆ.

ನಾಗರಿಕ ಗ್ರಾಹಕ ಮತ್ತು ನಾಗರಿಕ ಕ್ರಿಯಾ ಗುಂಪು (ಸಿಎಜಿ)

9/5, 11 ನೇ ಬೀದಿ, ಪದ್ಮನಾಭ ನಗರ,
ಅಡ್ಯಾರ್, ಚೆನ್ನೈ– 600 020
ಫೋನ್: 91-44-24460387/24914358
ಇ-ಮೇಲ್ helpdesk@cag.org.in/tpp@cag.org.in
ವೆಬ್‌ಸೈಟ್ : www.cag.org.in / www.thermalwatch.org.in